


بسم اللهِ الرّحمٰن الرّحيم

# ಬುರ್ಕಿನಾ ಫಾಸೋದ ಹುತಾತ್ಮರು – ಅಹ್ಮದಿಯತ್ತಿನ ಮಿನುಗುವ ನಕ್ಷತ್ರಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **20–01–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು:)*

وَلَا تَقُوْلُوْا لِمَنْ يُّقْتَلُ فِيْ سَبِيْلِ اللّٰهِ اَمْوَاتٌ ؕ بَلْ اَحْيَآءٌ وَّلٰكِنْ لَّا تَشْعُرُوْنَ

وَلَنَبْلُوَنَّكُمْ بِشَيْءٍ مِّنَ الْخَوْفِ وَالْجُوْعِ وَنَقْصٍ مِّنَ الْاَمْوَالِ وَالْاَنْفُسِ وَالثَّمَرٰتِ ؕ وَبَشِّرِ الصّٰبِرِيْنَ

الَّذِيْنَ اِذَآ اَصَابَتْهُمْ مُّصِيْبَةٌ ۙ قَالُوْٓا اِنَّا لِلّٰهِ وَاِنَّآ اِلَيْهِ رٰجِعُوْنَ

**ದೇವ ಮಾರ್ಗದಲ್ಲಿ ಹತ್ಯೆಗೀಡಾದವರ ಕುರಿತು ಅವರು ಮೃತಪಟ್ಟವರೆಂದು ಹೇಳಬೇಡಿರಿ. ಅವರು ಮೃತರಲ್ಲ; ಜೀವಂತರು. ಆದರೆ ನೀವು ಅದನ್ನು ಗ್ರಹಿಸುವುದಿಲ್ಲ. ನಿಶ್ಚಯವಾಗಿಯೂ ನಿಮ್ಮನ್ನು ನಾವು ಕೆಲವು ಬಗೆಯ ಭಯಾಶಂಕೆ ಮತ್ತು ಹಸಿವಿನಿಂದಲೂ ಧನನಷ್ಟ, ಪ್ರಾಣಹಾನಿ ಮತ್ತು ಫಲನಷ್ಟಗಳಿಂದಲೂ ಪರೀಕ್ಷಿಸುವೆವು. (ಓ ಪ್ರವಾದಿ,) ನೀನು ಸಹನಶೀಲರಿಗೆ ಶುಭ ವಾರ್ತೆಯನ್ನು ತಿಳಿಸು. ಅವರು ತಮಗೆ ಏನಾದರೂ ವಿಪತ್ತು ಬಂದೆರಗಿದರೆ, (ಗಾಬರಿಗೊಳ್ಳುವುದಿಲ್ಲ, ಬದಲು) ನಾವು ನಿಶ್ಚಯವಾಗಿಯೂ ಅಲ್ಲಾಹನಿಗಾಗಿ ಇರುವವರು ಹಾಗೂ ನಿಶ್ಚಯವಾಗಿಯೂ ಅವನೆಡೆಗೆಯೇ ಮರಳುವವರಾಗಿದ್ದೇವೆ ಎಂದು ಹೇಳುತ್ತಾರೆ. (2: 155 – 157)**

ಅಲ್ಲಾಹನ ಮಾರ್ಗದಲ್ಲಿ ಜೀವತ್ಯಾಗ ಮಾಡುವವರು ಮೃತರಲ್ಲ, ಜೀವಂತರು ಎಂದು ಅಲ್ಲಾಹನು ಹೇಳುತ್ತಾನೆ. ಅಹ್ಮದಿಯಾ ಜಮಾಅತಿನಲ್ಲಿ ಕಳೆದ ನೂರು ವರ್ಷಗಳಿಗಿಂತ ಹೆಚ್ಚು ಕಾಲದಿಂದ ಅಲ್ಲಾಹನ ಮಾರ್ಗದಲ್ಲಿ ಜೀವತ್ಯಾಗಗಳನ್ನು ಮಾಡಲಾಗುತ್ತಿವೆ. ಈ ಹುತಾತ್ಮರು ಪದವಿಯನ್ನು ಗಳಿಸಿರುವರು ಮತ್ತು ಅವರ ಪದವಿಗಳು ಸದಾ ಉನ್ನತಗೊಳ್ಳುತ್ತಾ ಇರುವುವು. ಅದರೊಂದಿಗೆ ಈ ಲೋಕದಲ್ಲೂ ಅವರ ಹೆಸರುಗಳು ಸದಾ ಕಾಲಕ್ಕೆ ಬೆಳಗಿದುವು. ಅಲ್ಲಾಹನ ಮಾರ್ಗದಲ್ಲಿ ಜೀವ ನೀಡಿದ್ದರಿಂದ ಅವರ ಮಾತ್ರವಲ್ಲ ಜಮಾಅತಿನ ಜೀವಕ್ಕೂ ಅವರು ಕಾರಣಕರ್ತರಾಗುತ್ತಾರೆ. ಜೀವಂತವಾಗಿ ಬಾಕಿಯುಳಿದವರ ಜೀವನ ಮತ್ತು ಪ್ರಗತಿಗಳಿಗೆ ಅವರು ಮಾರ್ಗಗಳಾಗುತ್ತಾರೆ. ಹೀಗಿರುವಾಗ ಅವರು ಮೃತರಾಗಲು ಹೇಗೆ ಸಾಧ್ಯ?

ಅಹ್ಮದಿಯಾ ಜಮಾಅತಿನಲ್ಲಿ ಈ ಜೀವತ್ಯಾಗದ ಪರಂಪರೆ ಹಝ್ರತ್ ಮಸೀಹ್ ಮೌಊದ್(ಅ)ರ ಜೀವಿತ ಕಾಲದಲ್ಲಿ ಹಝ್ರತ್ ಸಾಹಿಬ್‌ಝಾದ ಸಯ್ಯದ್ ಅಬ್ದುಲ್ಲತೀಫ್ ಶಹೀದ್(ರ)ರ ಜೀವತ್ಯಾಗದಿಂದ ಶುರುವಾಗಿತ್ತು. ಜೀವತ್ಯಾಗದ ಸೌಭಾಗ್ಯ ಆರಂಭದಲ್ಲಿ ಅಫ್ಘಾನಿಸ್ತಾನ, ಭಾರತ ಮತ್ತು ಪಾಕಿಸ್ತಾನದ ಅಹ್ಮದಿಯರಿಗೆ ಲಭಿಸುತ್ತಿತ್ತು. 2005ರಲ್ಲಿ ಆಫ್ರಿಕದ ಕಾಂಗೋದಲ್ಲಿ ಒಬ್ಬ ನಿಷ್ಠಾವಂತ ಅಹ್ಮದಿ ಕೇವಲ ಜಮಾಅತಿಗಾಗಿ ಜೀವತ್ಯಾಗವನ್ನು ಮಾಡಿದ್ದರು. ಆದರೆ ಕೆಲವು ದಿನಗಳ ಹಿಂದೆ ಬುರ್ಕಿನಾಫಾಸೋದಲ್ಲಿ ಆಫ್ರಿಕದ ಅಹ್ಮದಿಯರು ತೋರಿಸಿದ ಪ್ರೇಮ, ನಿಷ್ಠೆ, ನಂಬಿಕೆ ಮತ್ತು ದೃಢವಿಶ್ವಾಸದಿಂದ ತುಂಬಿರುವ ಮಾದರಿ ಸಮಾನತೆಯಿಲ್ಲದ್ದಾಗಿದೆ. ಹಝ್ರತ್ ಮಸೀಹ್ ಮೌಊದ್(ಅ)ರ ಸತ್ಯತೆಯನ್ನು ನಿರಾಕರಿಸಿದರೆ ಜೀವಂತವಾಗಿ ಉಳಿಸುವೆವು ಎಂಬ ಅವಕಾಶವನ್ನು ಅವರಿಗೆ ನೀಡಲಾಗಿತ್ತು. ಆದರೆ ಪರ್ವತಗಳಿಗಿಂತ ಸುದೃಢವಾದ ಸತ್ಯವಿಶ್ವಾಸವನ್ನು ಹೊಂದಿದ ಆ ಜನರು ಉತ್ತರಿಸಿದರು: ಜೀವವಂತು ಒಂದು ದಿನ ಹೊರಟು ಹೋಗುವುದು. ಇಂದಲ್ಲದಿದ್ದರೆ ನಾಳೆ. ಆದ್ದರಿಂದ ಅದನ್ನು ಉಳಿಸಲು ನಾವು ನಮ್ಮ ಸತ್ಯವಿಶ್ವಾಸವನ್ನು ಮಾರಲು ಸಾಧ್ಯವಿಲ್ಲ. ನಾವು ನೋಡಿದಂತಹ ಸತ್ಯವನ್ನು ನಮ್ಮಿಂದ ಬಿಡಲು ಸಾಧ್ಯವಲ್ಲ. ಹೀಗೆ ಒಬ್ಬರ ನಂತರ ಇನ್ನೊಬ್ಬರಂತೆ ತಮ್ಮ ಜೀವವನ್ನು ತ್ಯಾಗ ಮಾಡುತ್ತಾ ಹೋದರು. ಅವರ ಹೆಂಗಸರು ಮತ್ತು ಮಕ್ಕಳು ಈ ದೃಶ್ಯವನ್ನು ನೋಡುತ್ತಿದ್ದರು. ಆದರೆ ಯಾರೂ ರೋದಿಸಲಿಲ್ಲ.

ಹಝ್ರತ್ ಮಸೀಹ್ ಮೌಊದ್(ಅ)ರ ಕಾಲದ ಹಝ್ರತ್ ಸಾಹಿಬ್‌ಝಾದ ಅಬ್ದುಲ್ಲತೀಫ್(ರ)ರ ನಂತರ ಈ ಜನರು ಅಹ್ಮದಿಯಾ ಲೋಕದಲ್ಲಿ ತಮ್ಮ ತ್ಯಾಗಗಳ ಒಂದು ಹೊಸ ಚರಿತ್ರೆಯನ್ನು ಬರೆದರು. ಇವರು ತಮ್ಮ ಲೌಕಿಕ ಜೀವಗಳನ್ನು ತ್ಯಾಗ ಮಾಡಿಕೊಂಡು ಸದಾ ಕಾಲದ ಜೀವನವನ್ನು ಗಳಿಸುವವರಾದರು. ಇವರು ಜೀವ, ಸಂಪತ್ತು, ಸಮಯವನ್ನು ತ್ಯಾಗ ಮಾಡುವುದರ ಪ್ರತಿಜ್ಞೆಯನ್ನು ಈಡೇರಿಸಿದರು. ನಂತರ ಬಂದು, ಹಿಂದಿನವರಿಗಿಂತ ಮುಂದಾದರು. ಅಲ್ಲಾಹನ ಮಾರ್ಗದಲ್ಲಿ ತ್ಯಾಗಗಳನ್ನು ಮಾಡುವವರಿಗೆ ನೀಡಲಾದ ಸುವಾರ್ತೆಗಳಿಗೆ ಅವರಲ್ಲಿ ಪ್ರತಿಯೊಬ್ಬರನ್ನು ಅಲ್ಲಾಹನು ವಾರಸುದಾರರನ್ನಾಗಿ ಮಾಡಲಿ.

ಲಭಿಸಿರುವ ವಿವರಗಳ ಪ್ರಕಾರ ಬುರ್ಕಿನಾಫಾಸೋದ ಡೋರಿ ಪಟ್ಟಣದಲ್ಲಿ ಹೊಸದಾಗಿ ನೆಲೆಸಲಾದ ಮಹ್‌ದಿಯಾಬಾದ್ ಎಂಬ ಸ್ಥಳದಲ್ಲಿ ಜಮಾಅತ್ ಇದೆ. ಜನವರಿ 11ರಂದು ಇಶಾದ ಸಮಯದಲ್ಲಿ 9 ಅಹ್ಮದೀ ಹಿರಿಯರನ್ನು ಮಸೀದಿಯ ಅಂಗಳದಲ್ಲಿ ಇತರ ಅಹ್ಮದಿಯರ ಮುಂದೆ ಇಸ್ಲಾಂ ಅಹ್ಮದಿಯ್ಯತ್ತನ್ನು ನಿರಾಕರಿಸದೇ ಇದ್ದ ಕಾರಣದಿಂದ ಒಬ್ಬೊಬ್ಬರನ್ನಾಗಿ ಶಹೀದ್ ಮಾಡಲಾಯಿತು.

ಆಯುಧಧಾರಿಗಳಾದ ಎಂಟು ವ್ಯಕ್ತಿಗಳು ಮಸೀದಿಗೆ ಬಂದಿದ್ದರು. ಅವರು ಅಹ್ಮದಿಯಾ ಮಸೀದಿಗೆ ಬರುವುದಕ್ಕೆ ಮುಂಚೆ ಸಮೀಪದಲ್ಲಿರುವ ವಹಾಬಿಯರ ಮಸೀದಿಯಲ್ಲಿ ಮಗ್ರಿಬಿನಿಂದ ಇಶಾದ ವರೆಗೆ ಇದ್ದರು. ಆದರೆ ಅಲ್ಲಿ ಯಾರಿಗೂ ಯಾವುದೇ ಹಾನಿ ಉಂಟುಮಾಡಲಿಲ್ಲ. ಅವರು ಅಹ್ಮದಿಯಾ ಮಸೀದಿಗೆ ಬಂದಾಗ ಇಶಾದ ಅಝ್ಹಾನ್ ಆಗುತ್ತಿತ್ತು. ಅಝ್ಹಾನ್ ಮುಗಿದ ನಂತರ, ಸಹೋದರರು ಬೇಗನೇ ಮಸೀದಿಗೆ ಬನ್ನಿರಿ, ಕೆಲವರಿಗೆ ನಿಮ್ಮೊಡನೆ ಮಾತನಾಡಲಿಕ್ಕಿದೆ ಎಂದು ಘೋಷಿಸುವಂತೆ ಮುಅಧ್ದಿನ್‌ಗೆ ತಿಳಿಸಿದರು. ಅಹ್ಮದಿಯಾ ಜಮಾಅತಿನ ವಿಶ್ವಾಸಗಳ ಬಗ್ಗೆ ಅವರು ಇಮಾಂ ಅಲ್‌ಹಾಜ್ ಇಬ್ರಾಹೀಂ ಬದೀಗ ಸಾಹಿಬ್‌ರೊಡನೆ ಬಹಳಷ್ಟು ಪ್ರಶ್ನೆಗಳನ್ನು ಕೇಳಿದರು. ಅವರ ಪ್ರಶ್ನೆಗಳಿಗೆ ಉತ್ತರವಾಗಿ ಇಮಾಂ ಸಾಹಿಬರು – ನಾವು ಮುಸ್ಲಿಮರಾಗಿರುವೆವು ಮತ್ತು ಹಝ್ರತ್ ಪೈಗಂಬರ್[ಸ]ರನ್ನು ನಂಬುವವರಾಗಿರುವೆವು, ನಮ್ಮ ಸಂಬಂಧ ಅಹ್ಮದಿಯಾ ಮುಸ್ಲಿಂ ಜಮಾಅತಿನೊಂದಿಗೆ ಆಗಿದೆ, ಹಝ್ರತ್ ಈಸಾ[ಅ] ಮೃತಪಟ್ಟಿರುವರು ಮತ್ತು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹಿಬ್ ಇಮಾಂ ಮಹ್‌ದಿ ಹಾಗೂ ಮಸೀಹ್ ಮೌಊದ್ ಆಗಿರುವರು ಎಂದು ಇಮಾಂ ಸಾಹಿಬ್ ಹೇಳಿದರು. ಭಯೋತ್ಪಾದಕರು ಹೇಳಿದರು: ಅಹ್ಮದಿಯರು ಅಪ್ಪಟ ಕಾಫಿರ್‌ಗಳಾಗಿರುವರು. ನಂತರ ಮಸೀದಿಯೊಂದಿಗೆ ಹೊಂದಿಕೊಂಡಿದ್ದ ಟೈಲರಿಂಗ್ ಸೆಂಟರಿನಲ್ಲಿದ್ದ ಹಝ್ರತ್ ಮಸೀಹ್ ಮೌಊದ್[ಅ] ಮತ್ತು ಖಲೀಫರ ಫೋಟೋಗಳ ಕುರಿತು ಅವರು ಪ್ರಶ್ನೆಗಳನ್ನು ಕೇಳಿದರು. ಪ್ರತಿಯೊಂದು ಫೋಟೋಗಳ ಕಿರುಪರಿಚಯವನ್ನು ಇಮಾಂ ಸಾಹಿಬ್ ನೀಡಿದರು. ಮಸೀಹ್ ಮೌಊದ್[ಅ]ರ ವಾದ ಸುಳ್ಳೆಂದು ಭಯೋತ್ಪಾದಕರು ಹೇಳಿದರು – ನಊಧುಬಿಲ್ಲಾಹ್. ಅನಂತರ ಮಸೀದಿಯಲ್ಲಿ ಇದ್ದ ಸುಮಾರು 70 ಅಹ್ಮದಿಯರಲ್ಲಿ ಮಕ್ಕಳ, ಯುವಕರ, ಹಿರಿಯರ ಬೇರೆ ಬೇರೆ ಗ್ರೂಪ್‌ಗಳನ್ನು ಪ್ರಾಯದ ಪ್ರಕಾರ ಮಾಡಿದರು. ಹತ್ತು ಹನ್ನೆರಡು ಮಹಿಳೆಯರು ಸಹ ಇದ್ದರು. ಭಯೋತ್ಪಾದಕರು ಹಿರಿವಯಸ್ಸಿನವರೊಡನೆ ಮಸೀದಿಯ ಅಂಗಳಕ್ಕೆ ಹೋಗಲು ಹೇಳಿದರು. ಅವರಲ್ಲಿ ಒಬ್ಬರು ಅಂಗವಿಕಲ ಸಹ ಇದ್ದರು. ನೀವು ಯಾವುದೇ ಕೆಲಸಕ್ಕೆ ಬಾರದವರಾಗಿರುವಿರಿ, ಆದ್ದರಿಂದ ಮಸೀದಿಯಲ್ಲೇ ಕುಳಿತುಕೊಳ್ಳಿರಿ ಎಂದು ಅವರೊಡನೆ ಭಯೋತ್ಪಾದಕರು ಹೇಳಿದರು. ಉಳಿದ ಮಂದಿಗಳನ್ನು ಅಂಗಳಕ್ಕೆ ಕರಕೊಂಡು ಹೋದರು. ಅಹ್ಮದಿಯ್ಯತ್ ಬಿಡುವುದಾದರೆ ನಾವು ನಿಮ್ಮನ್ನು ಉಳಿಸುವೆವು ಎಂದು ಇಮಾಂ ಸಾಹಿಬ್‌ರೊಡನೆ ಅವರು ಹೇಳಿದರು. ಇಮಾಂ ಸಾಹಿಬ್ ಹೇಳಿದರು: ನನ್ನ ತಲೆಯನ್ನು ಕೊಯ್ಯಬೇಕಾದರೆ ಕೊಯ್ಯಿರಿ. ಆದರೆ ನಾನು ಅಹ್ಮದಿಯ್ಯತ್ ಉಪೇಕ್ಷಿಸುವುದಿಲ್ಲ. ಭಯೋತ್ಪಾದಕರು ಇಮಾಂ ಸಾಹಿಬ್‌ರನ್ನು ನೆಲದಲ್ಲಿ ಮಲಗಿಸಿ ಅವರ ಕತ್ತನ್ನು ಕೊಯ್ಯಲು ಪ್ರಯತ್ನಿಸಿದರು. ನನ್ನನ್ನು ನಿಲ್ಲಿಸಿಕೊಂಡು ಕೊಲ್ಲಿರಿ ಎಂದು ಇಮಾಂ ಸಾಹಿಬ್ ಹೇಳಿದರು. ಆಗ ಅವರು ಇಮಾಂ ಸಾಹಿಬ್‌ರನ್ನು ಗುಂಡು ಹಾರಿಸಿ ಶಹೀದ್ ಮಾಡಿದರು.

ಉಳಿದ ಜನರು ಭಯಗೊಂಡು ತಮ್ಮ ವಿಶ್ವಾಸದಿಂದ ಹಿಂದೆ ಸರಿಯುವರು ಎಂದು ಭಯೋತ್ಪಾದಕರು ಭಾವಿಸಿದ್ದರು. ಇನ್ನೊಬ್ಬ ಹಿರಿಯ ಅಹ್ಮದಿಯನ್ನು ಕರೆದು ಹೇಳಿದರು: ನೀವು ಅಹ್ಮದಿಯ್ಯತ್ತನ್ನು ಬಿಡುತ್ತೀರೋ ಸಾಯುತ್ತೀರೋ? ಆಗ ಅವರು ಸಹ ಅಹ್ಮದಿಯ್ಯತ್ತನ್ನು ನಿರಾಕರಿಸಲು ಸಾಧ್ಯವಲ್ಲ ಎಂದು ಹೇಳಿದರು. ಅವರನ್ನು ಕೂಡ ಗುಂಡು ಹಾರಿಸಿ ಶಹೀದ್ ಮಾಡಲಾಯಿತು. ಹೀಗೆ ಉಳಿದ ವ್ಯಕ್ತಿಗಳನ್ನು ಒಬ್ಬೊಬ್ಬರನ್ನಾಗಿ ಕರೆದುಕೊಂಡು ಶಹೀದ್ ಮಾಡಲಾಯಿತು. ಯಾರೂ ಕಿಂಚಿತ್ತೂ ದೌರ್ಬಲ್ಯವನ್ನು ತೋರಿಸಲೂ ಇಲ್ಲ ಅಹ್ಮದಿಯ್ಯತ್ತನ್ನು ಬಿಡಲೂ ಇಲ್ಲ. ಯಾರ ವಿಶ್ವಾಸ ಕೂಡ ಚಂಚಲಗೊಳ್ಳಲಿಲ್ಲ. ಎಲ್ಲರೂ ಒಬ್ಬರಿಗೊಬ್ಬರು ಮಿಗಿಲಾದ ದೃಢವಿಶ್ವಾಸ, ನಿಷ್ಠೆ ಮತ್ತು ಧೈರ್ಯವನ್ನು ಪ್ರಕಟಿಸಿದರು. ಅಲ್ಲಾಹನ ಸನ್ನಿಧಿಯಲ್ಲಿ ತಮ್ಮ ಜೀವಗಳನ್ನು ಸಮರ್ಪಿಸಿದರು. ಪ್ರತಿಯೊಬ್ಬ ಶಹೀದ್‌ರ ಮೇಲೆ ಕನಿಷ್ಠ ಮೂರು ಗುಂಡುಗಳನ್ನು ಹಾರಿಸಲಾಗಿದ್ದುವು. ಅವರಲ್ಲಿ ಇಬ್ಬರು ಅವಳಿ ಸಹೋದರರು ಸಹ ಇದ್ದರು.

ಹಝ್ರತ್ ಸಾಹಿಬ್‌ಝಾದ ಅಬ್ದುಲ್ಲತೀಫ್ ಶಹೀದ್ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸುತ್ತಾ ತಧ್‌ಕಿರತುಶ್ಶಹಾದತೈನ್ ಎಂಬ ಗ್ರಂಥದಲ್ಲಿ ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ಪ್ರಸ್ತಾಪಿಸಿರುವರು: ಅಲ್ಲಾಹನು ಅವರಂತಹ ಅನೇಕ ಪ್ರತಿನಿಧಿಗಳನ್ನು ಸೃಷ್ಟಿಸುವನು. ಇಂದು ಆಫ್ರಿಕದ ನಿವಾಸಿಗಳು ಈ ಮಾದರಿಯನ್ನು ತೋರಿಸಿದರು ಮತ್ತು ಅವರ ಸರಿಯಾದ ಪ್ರತಿನಿಧಿಗಳಾದರು ಎಂಬುದಕ್ಕೆ ನಾವು ಸಾಕ್ಷಿಗಳಾಗಿದ್ದೇವೆ.

ಭಯೋತ್ಪಾದಕರ ಈ ಎಲ್ಲ ಕೆಲಸಗಳು ಸುಮಾರು ಒಂದುವರೆ ಗಂಟೆ ಕಾಲ ಮುಂದುವರೆದಿತ್ತು. ಈ ಸಂದರ್ಭದಲ್ಲಿ ಉಳಿದ ವ್ಯಕ್ತಿಗಳು ಯಾವ ನೋವಿನಿಂದ ಸಮಯ ಕಳೆದರೋ ಅದರ ಅಂದಾಜನ್ನು ಮಾಡಬಹುದಾಗಿದೆ. ಅವರ ಕಣ್ಣ ಮುಂದೆ ಅವರ ಪ್ರಿಯರನ್ನು ಶಹೀದ್ ಮಾಡಲಾಗುತ್ತಿತ್ತು.

(ಹುಝೂರ್ ಹೇಳಿದರು:) ಈಗ ನಾನು ಸಂಕ್ಷೇಪವಾಗಿ ಈ ಶಹೀದರ ಜೀವನ ಸ್ಥಿತಿಗಳನ್ನು ಪ್ರಸ್ತಾಪಿಸುವೆನು. ಇದರಿಂದ ಅವರ ಸತ್ಯವಿಶ್ವಾಸದ ದೃಢತೆಯ ಬಗ್ಗೆ ಗೊತ್ತಾಗುವುದು.

**ಇಮಾಂ ಅಲ್‌ಹಾಜ್ ಇಬ್ರಾಹೀಂ ಬದೀಗ ಸಾಹಿಬ್:** ಅವರು ಆ ಪ್ರದೇಶದ ಅತಿ ದೊಡ್ಡ ವಹಾಬಿ ಇಮಾಂ ಆಗಿದ್ದರು. ಇಮಾಂ ಸಾಹಿಬ್ ಬಹಳ ಅರಿವುಳ್ಳ ವ್ಯಕ್ತಿಯಾಗಿದ್ದರು. ಆ ಗ್ರಾಮದ ಜನರು ತಮಾಶಿಕ್ ಗೋತ್ರದವರಾಗಿರುವರು. ಇಮಾಂ ಸಾಹಿಬ್‌ರು ತಮಾಶಿಕ್ ಭಾಷೆಯ ಪಂಡಿತರಾಗಿದ್ದರು. ಅಹ್ಮದಿಯಾಗುವುದಕ್ಕೆ ಮುಂಚೆ ಅವರು ಅನೇಕ ಗ್ರಾಮಗಳ ಸರದಾರರಾಗಿದ್ದರು. ಪ್ರದೇಶದ ದೊಡ್ಡ ದೊಡ್ಡ ಪಂಡಿತರು ಅವರ ಬಳಿ ಕುಳಿತುಕೊಳ್ಳುವುದನ್ನು ಹಿರಿಮೆ ಎಂದು ಭಾವಿಸುತ್ತಿದ್ದರು. 1998ರಲ್ಲಿ ಡೋರಿಯಲ್ಲಿ ವ್ಯವಸ್ಥಾಪಿತವಾದ ಅಹ್ಮದಿಯಾ ಮಿಶನ್ ಸ್ಥಾಪನೆಯಾಗಿರುವ ಮಾಹಿತಿ ಇಮಾಂ ಸಾಹಿಬ್‌ರಿಗೆ ತಲುಪಿತು. ಹೀಗೆ ಅವರು 7 ವ್ಯಕ್ತಿಗಳೊಂದಿಗೆ ಮಿಶನ್ ಹೌಸಿಗೆ ಬಂದರು. ಬಹಳಷ್ಟು ಅನ್ವೇಷಣೆ ನಡೆಸಿದ ನಂತರ ಬೈಅತ್ ಮಾಡಿದರು. ಮನವರಿಕೆ ಮಾಡಿಕೊಂಡು ಸತ್ಯವನ್ನು ಸ್ವೀಕಾರ ಮಾಡಿಕೊಂಡರು ಮತ್ತು ತ್ಯಾಗದ ಉನ್ನತ ಮಾದರಿಯನ್ನು ಸ್ಥಾಪಿಸಿದರು. ನಿರ್ಭೀತ ಪ್ರಚಾರಕ ಮತ್ತು ತ್ಯಾಗಶೀಲ ಅಹ್ಮದಿಯಾಗಿದ್ದರು. ಅವರ ಪ್ರಯತ್ನಗಳ ಮೂಲಕ

ಪೂರ್ತಿ ಪ್ರದೇಶದಲ್ಲಿ ಅಹ್ಮದಿಯ್ಯತ್ ಹರಡಿತು ಮತ್ತು ಅನೇಕ ಜಮಾಅತುಗಳು ಸ್ಥಾಪನೆಯಾಯಿತು. ತಬ್ಲೀಗ್ ಮಾಡುವ ಆವೇಶ ಹೊಂದಿದ್ದರು. ಕೊಲೆಯ ಬೆದರಿಕೆಯಿದ್ದೂ ತಮ್ಮ ಪ್ರಯತ್ನಗಳನ್ನು ನಿಲ್ಲಿಸಿರಲಿಲ್ಲ. ಖಿಲಾಫತಿನೊಂದಿಗೂ ಅಪಾರವಾದ ನಿಷ್ಠೆಯ ಸಂಬಂಧವನ್ನು ಹೊಂದಿದ್ದರು. ಜನರೊಡನೆ ಬಹಳ ಉತ್ತಮವಾಗಿ ವರ್ತಿಸುತ್ತಿದ್ದರು ಮತ್ತು ಇತರರಿಗಾಗಿ ತ್ಯಾಗ ಮಾಡುವುದು ಅವರ ಗುಣವಾಗಿತ್ತು. ಪ್ರದೇಶದ ಜನರು ಅವರನ್ನು ಬಹಳ ಗೌರವಿಸುತ್ತಿದ್ದರು. ಪ್ರತಿಯೊಂದು ಸಾಂಪತ್ತಿಕ ತ್ಯಾಗಗಳಲ್ಲಿ ಮೊತ್ತ ಮೊದಲು ಸ್ವತಃ ಧನತ್ಯಾಗಗಳನ್ನು ಮಾಡುತ್ತಿದ್ದರು. ಜಮಾಅತಿನ ಎಲ್ಲ ರೀತಿಯ ಕೆಲಸಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದರು.

**ಅಲ್‌ಹಸನ್ ಆಗ್ ಮಾನಿಯಲ್ ಸಾಹಿಬ್:** ವೃತ್ತಿಯಲ್ಲಿ ಕೃಷಿಕರಾಗಿದ್ದರು. 1999ರಲ್ಲಿ ಅಹ್ಮದಿಯ್ಯತ್ ಸ್ವೀಕಾರ ಮಾಡಿದ್ದರು. ಬೈಅತ್ತಿನ ಸಮಯದಿಂದಲೇ ನಿಷ್ಠೆ ಮತ್ತು ಪ್ರಾಮಾಣಿಕತೆಯಲ್ಲಿ ಪ್ರಗತಿ ಹೊಂದುತ್ತಾ ಹೋದರು. ನಿಯತವಾಗಿ ಕಡ್ಡಾಯ ಮತ್ತು ತಹಜ್ಜುದ್ ನಮಾಝ಼್‌ಗಳನ್ನು ನಿರ್ವಹಿಸುತ್ತಿದ್ದರು. ಜಮಾಅತಿಗಾಗಿ ಜೀವ, ಸಂಪತ್ತು ಮತ್ತು ಸಮಯವನ್ನು ಅಸಾಮಾನ್ಯವಾಗಿ ತ್ಯಾಗ ಮಾಡುತ್ತಿದ್ದರು.

**ಹುಸೈನೀ ಆಗ್‌ಮಾಲಿ ಅಯೀಲ್ ಸಾಹಿಬ್:** ಇವರು 1999ರಲ್ಲಿ ಬೈಅತ್ ಮಾಡಿದ್ದರು. ತಮ್ಮ ಗ್ರಾಮದ ಆರಂಭಿಕ ಅಹ್ಮದಿಯರಲ್ಲಿ ಒಬ್ಬರಾಗಿದ್ದರು. ಈಗ ಝ಼ಈಮ್ ಅನ್ಸಾರುಲ್ಲಾಹ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಅವರ ಅವಳಿ ಸಹೋದರರಾದ **ಅಲ್‌ಹಸನ್ ಆಗ್‌ಮಾನಿಯಲ್** ಸಹ ಈ ಘಟನೆಯಲ್ಲಿ ಶಹೀದ್ ಆಗಿರುವರು. ಇಬ್ಬರು ಸಹೋದರರು ಒಂದೇ ದಿನ ಲೋಕಕ್ಕೆ ಬಂದರು ಮತ್ತು ಒಂದೇ ದಿನ ಲೋಕದಿಂದ ಹೊರಟು ಹೋದರು.

**ಹಮೀದ್ ಆಗ್ ಅಬ್ದುರ್ರಹ್ಮಾನ್ ಸಾಹಿಬ್:** ವೃತ್ತಿಯಲ್ಲಿ ಕೃಷಿಕರು. 1999ರಲ್ಲಿ ಬೈಅತ್ ಮಾಡಿದ್ದರು. ಪರಿಶುದ್ಧ ಹೃದಯಿ ಮತ್ತು ತಾಳ್ಮೆಯುಳ್ಳವರಾಗಿದ್ದರು. ಜಮಾಅತಿನ ಕೆಲಸಗಳಲ್ಲಿ ಮೊದಲಿಗರ ಪಂಕ್ತಿಯಲ್ಲಿ ಗಣಿಸಲ್ಪಡುತ್ತಿದ್ದರು. ಇಮಾಂ ಸಾಹಿಬ್‌ರ ಸಹಾಯಕರಾಗಿದ್ದರು.

**ಸುಲಹ್ ಆಗ್ ಇಬ್ರಾಹೀಂ ಸಾಹಿಬ್:** ಇವರು ರೈತರಾಗಿದ್ದರು. ನಿಯತವಾಗಿ ಬಾಜಮಾಅತ್ ನಮಾಝ಼್ ನಿರ್ವಹಿಸುತ್ತಿದ್ದರು. ಸರಿಯಾಗಿ ಚಂದಗಳನ್ನು ನೀಡುತ್ತಿದ್ದರು. ಅರಿವುಳ್ಳವರಾಗಿದ್ದರು. ಧಾರ್ಮಿಕ ಮತ್ತು ಶಿಕ್ಷಣ ಪರವಾದ ಮಾತುಕತೆಗಳನ್ನು ನಡೆಸುತ್ತಿದ್ದರು. ಅತ್ಯಂತ ಸಭ್ಯ ವ್ಯಕ್ತಿಯಾಗಿದ್ದರು. ಪ್ರತಿಯೊಬ್ಬರೊಡನೆ ಉತ್ತಮವಾಗಿ ವರ್ತಿಸುವುದು ಅವರ ಗುಣವಾಗಿತ್ತು.

**ಉಸ್ಮಾನ್ ಆಗ್ ಸೋದೇ ಸಾಹಿಬ್:** ಮಹ್‌ದಿಯಾಬಾದಿನ ಮಸೀದಿ ನಿರ್ಮಾಣದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. ಐದು ಹೊತ್ತಿನ ನಮಾಝ಼್‌ಗಳು ಮತ್ತು ತಹಜ್ಜುದ್ ನಮಾಝ಼್‌ಗಳನ್ನು ನಿಯತವಾಗಿ ನಿರ್ವಹಿಸುತ್ತಿದ್ದರು. ಇವರು ವ್ಯಾಪಾರಿಯಾಗಿದ್ದರು. ಅತ್ಯಂತ ನಿಷ್ಠಾವಂತರಾಗಿದ್ದರು. ನನಗೂ ದುಆದ ಪತ್ರಗಳನ್ನು ನಿಯತವಾಗಿ ಬರೆಯುತ್ತಿದ್ದರು.

**ಆಗಾಲಿ ಆಗ್‌ಮಾ ಗೋಯೇಲ್ ಸಾಹಿಬ್:** ತಮ್ಮ ಪಿತನ ಜೊತೆಗೆ 1999ರಲ್ಲಿ ಅಹ್ಮದಿಯ್ಯತ್ ಸ್ವೀಕಾರ ಮಾಡಿಕೊಂಡಿದ್ದರು. ಇವರು ಕೃಷಿಕರಾಗಿದ್ದರು. ಬಹಳ ನಿಷ್ಠಾವಂತ ಅಹ್ಮದಿಯಾಗಿದ್ದರು. ನಮಾಝ಼್‌ಗಳಲ್ಲಿ ಮತ್ತು ಚಂದಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು.

**ಮೂಸಾ ಆಗ್ ಅದ್‌ರಾಹಿ ಸಾಹಿಬ್:** ವೃತ್ತಿಯಲ್ಲಿ ಕೃಷಿಕರು. ತಹಜ್ಜುದ್ ಮತ್ತು ಇತರ ನಮಾಝ಼್‌ಗಳನ್ನು ನಿಯತವಾಗಿ ನಿರ್ವಹಿಸುತ್ತಿದ್ದರು. ದೇವಸ್ಮರಣೆಯಲ್ಲಿ ನಿರತರಾಗುತ್ತಿದ್ದರು. ಒಬ್ಬ ನಿಷ್ಠಾವಂತ ಮತ್ತು ತ್ಯಾಗಶೀಲ ಅಹ್ಮದಿ ಎಂಬುದಕ್ಕೆ ಮಾದರಿಯಾಗಿದ್ದರು. ನನಗೆ ನಿಯತವಾಗಿ ದುಆಗಾಗಿ ಪತ್ರಗಳನ್ನು ಬರೆಯುತ್ತಿದ್ದರು.

**ಆಗೋಮ ಆಗ್ ಅಬ್ದುರ್ರಹ್ಮಾನ್ ಸಾಹಿಬ್:** ಇವರು ಶಹೀದ್‌ರಲ್ಲಿ ಅತ್ಯಂತ ಕಿರಿಯರಾಗಿದ್ದರು. 1999ರಲ್ಲಿ 20ನೇ ವಯಸ್ಸಿನಲ್ಲಿ ಅಹ್ಮದಿಯ್ಯತ್ ಸ್ವೀಕಾರ ಮಾಡಿದರು. ಅನಂತರ ಜಮಾಅತಿನೊಂದಿಗೆ ನಿಷ್ಠೆ ಮತ್ತು ಪ್ರಾಮಾಣಿಕತೆಯಲ್ಲಿ ಅಭಿವೃದ್ಧಿಗೊಂಡರು. ಅತ್ಯಂತ ನಿಷ್ಠಾವಂತ ಮತ್ತು ತ್ಯಾಗಶೀಲ ಅಹ್ಮದಿಯಾಗಿದ್ದರು. ನಾಇಬ್ ಇಮಾಂ ಆಗಿರುವೆನು ಎಂದು ಅವರು ಭಯೋತ್ಪಾದಕರೊಡನೆ ಯಾವುದೇ ಹಿಂಜರಿಕೆ ಇಲ್ಲದೆ ಹೇಳಿದರು. 8 ವ್ಯಕ್ತಿಗಳನ್ನು ಶಹೀದ್ ಮಾಡಲಾದಾಗ ಕಿರಿಯವರಾಗಿ ಇವರು ಇದ್ದರು. ಆದರೆ ಬಹಳ ಧೈರ್ಯದಿಂದ ಅವರು ಹೀಗೆ ಹೇಳಿದರು: ಯಾವ ಮಾರ್ಗದಲ್ಲಿ ಹಿರಿಯರು ಜೀವತ್ಯಾಗ ಮಾಡಿರುವರೋ ನಾನು ಕೂಡ ಜೀವತ್ಯಾಗ ಮಾಡಲು ತಯಾರಾಗಿರುವೆನು. ಭಯೋತ್ಪಾದಕರು ನಿರ್ದಯವಾಗಿ ಅವರ ಮುಖದ ಮೇಲೆ ಗುಂಡು ಹಾರಿಸಿ ಅವರನ್ನು ಶಹೀದ್ ಮಾಡಿದರು.

ಪ್ರತಿಯೊಬ್ಬರ ಹೆಸರಿನ ಜೊತೆಗೆ ಆಗ್ ಎಂಬ ಪದ ಇದೆ. ಈ ಪದದ ಅರ್ಥ ಇಬ್ನ್ (ಪುತ್ರ) ಎಂದಾಗಿದೆ. ಒಟ್ಟಿನಲ್ಲಿ ಇವರು ಅಹ್ಮದಿಯ್ಯತ್ತಿನ ಬೆಳಗುವ ನಕ್ಷತ್ರಗಳಾಗಿರುವರು. ಇವರು ತಮ್ಮ ಹಿಂದೆ ಒಂದು ಮಾದರಿಯನ್ನು ಬಿಟ್ಟು ಹೋಗಿರುವರು. ಅಲ್ಲಾಹನು ಅವರ ಮಕ್ಕಳ ನಂಬಿಕೆ ಮತ್ತು ದೃಢವಿಶ್ವಾಸವನ್ನು ವರ್ಧಿಸಲಿ. ಅಲ್ಲಾಹನು ಅವರ ಸಂಬಂಧಿಕರಿಗೆ ಸಹನೆ ಮತ್ತು ಧೈರ್ಯವನ್ನು ದಯಪಾಲಿಸಲಿ. ಹಿರಿಯರು ಯಾವ ಉದ್ದೇಶಕ್ಕಾಗಿ ತಮ್ಮ ಜೀವಗಳನ್ನು ಕಾಣಿಕೆಯಾಗಿ ಸಮರ್ಪಿಸಿರುವರೋ ಅದನ್ನು ಮನವರಿಕೆ ಮಾಡಲು ಅವರ ಮಕ್ಕಳಿಗೆ ಸೌಭಾಗ್ಯ ಲಭಿಸಲಿ.

(ಹುಝೂರ್ ಹೇಳಿದರು:) ಶಹೀದರ ಕುಟುಂಬಗಳ ಆವಶ್ಯಕತೆಗಳನ್ನು ಈಡೇರಿಸಲು ಮತ್ತು ತಮ್ಮ ಸ್ವಂತ ಕಾಲುಗಳಲ್ಲಿ ಅವರು ನಿಲ್ಲುವಂತಾಗಲು ನಾಲ್ಕನೇ ಖಿಲಾಫತ್ ಕಾಲದಲ್ಲಿ **ಸಯ್ಯದುನಾ ಬಿಲಾಲ್ ಫಂಡ್** ಶುರು ಮಾಡಲಾಗಿತ್ತು. ಅದರಿಂದ ಶಹೀದ್‌ರಿಗೆ ಖರ್ಚು ಮಾಡಲಾಗುತ್ತದೆ. ಶಹೀದ್‌ರಿಗೆ ಕೊಡಲು ಬಯಸುವವರು ಈ ಫಂಡ್‌ನಲ್ಲಿ ಪಾವತಿ ಮಾಡಿರಿ. ಇದು ಆ ಶಹೀದ್‌ರೊಡನೆ ಮಾಡುವ ಔದಾರ್ಯವಲ್ಲ. ಬದಲಾಗಿ ಅವರ ಆವಶ್ಯಕತೆಗಳ ಬಗ್ಗೆ ಕಾಳಜಿ ವಹಿಸುವುದು ನಮ್ಮ ಕರ್ತವ್ಯವಾಗಿದೆ. ಅದನ್ನು ಈಡೇರಿಸಿರಿ.

(ಹಝ್ರತ್ ಮಸೀಹ್ ಮೌಊದ್[ಅ]ರ ಒಂದು ಉಲ್ಲೇಖವನ್ನು ಪ್ರಸ್ತಾಪಿಸುತ್ತಾ ಹುಝೂರ್ ಹೇಳಿದರು:) ಈ ತ್ಯಾಗ ಮಾಡುವವರು ಈ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಈಗ ಹಿಂದೆ ಉಳಿದವರ ಪರೀಕ್ಷೆಯಾಗಿದೆ. ನಂಬಿಕೆ ಮತ್ತು ದೃಢವಿಶ್ವಾಸದಲ್ಲಿ ಸ್ಥಿರವಾಗಿ ನೆಲೆನಿಲ್ಲಲು ಅಲ್ಲಾಹನು ನಮ್ಮೆಗೆಲ್ಲರಿಗೂ ಸೌಭಾಗ್ಯ ನೀಡಲಿ. ಅಲ್ಲಾಹನು ಈ ಶಹೀದ್‌ರ ಪದವಿಗಳನ್ನು ವರ್ಧಿಸಲಿ, ಅದನ್ನು ಫಲವತ್ತನ್ನಾಗಿ ಮಾಡಲಿ, ಅದರ ಪರಿಣಾಮವಾಗಿ ಹಝ್ರತ್ ಪೈಗಂಬರ್[ಸ]ರ ಅಧ್ಯಾಪನೆ ಲೋಕದಲ್ಲಿ ಹರಡುವುದನ್ನು ನಾವು ಕಾಣುವಂತಾಗಲಿ.

(ಕೊನೆಗೆ ಶಹೀದ್‌ರ ಜನಾಝ಼ ಗಾಯಿಬ್‌ನ ಜೊತೆಗೆ ಅಮೇರಿಕದ ಡಾಕ್ಟರ್ ಕರೀಮುಲ್ಲಾಹ್ ಝ಼ೀರ್‌ವಿ ಸಾಹಿಬ್ ಮತ್ತು ಅವರ ಪತ್ನಿ ಸನ್ಮಾನ್ಯ ಅಮತುಲ್ಲತೀಫ್ ಝ಼ೀರ್‌ವಿ ಸಾಹಿಬರವರ ಜನಾಝ಼ ಗಾಯಿಬ್ ಸಹ ನಿರ್ವಹಿಸುವುದಾಗಿ ಹುಝೂರ್ ಹೇಳಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*
*At, **'Masjid Mubarak',** Islamabad, Tilford, UK, on 20-01-2023*
**Summarized by** *Majlis Ansarullah Bharat*
***Kannada Translation**:* Moulavi Inamullah for Kannada Desk, Qadian
***Reviewed by**:* M.P Ibrahim |***Layout**:* U Basheer Ahmad
***Published By**:* Kannada Isha'at Team for Nazarath Nashr-O-Isha'ath, Qadian
***Email***: *khutuba.kannada@gmail.com*
**You can find all the Sermons archived at**: www.alislam.org/friday-sermon